1	2	3
4.	ಅಳ್ನಾವರ	: ಅಳ್ನಾವರ ಬೆಣಚಿ, ಬಾಲಗೇರಿ, ಡೋರಿ ಮುಗದ, ಮಂಡಿಹಾಳ, ವರನಾಗಲಾವಿ, ದಡ್ಡಿಕಮಲಾಪುರ, ಹೊನ್ನಾಪುರ, ಕಂಬಾರಗಣವಿ ಅರವಟಗಿ, ಅಂಚೊಳ್ಳಿ, ಕೋಗಿಲೆಗೇರಿ, ಕುಂಬಾರಕೊಪ್ಪ. ಕಡಬಗಟ್ಟಿ, ಹಿಂಡಸಗೇರಿ, ಹೊಲಕೇರಿ, ಕಲಕೇರಿ, ಶೇಷಗಿರಿ, ಬಾಳಗಟ್ಟಿ, ಬೊಮ್ಮಸಿಕೊಪ್ಪ, ನಾ.ದ.ಕೊಪ್ಪ ದೇವರಹುಬ್ಬಳ್ಳಿ, ಮುರಕಟ್ಟಿ, ಹಳ್ಳಿಕೇರಿ, ಮಾವಿನಕೊಪ್ಪ ಹೊಲ್ತಿಕೋಟೆ, ಅಂಬಲಿಕೊಪ್ಪ. ರಾಮಾಪುರ, ವೀರಾಪುರ, ಕಲ್ಲಾಪುರ, ಹೊಸನಾಳ.

ಧಾರವಾಡ ಜಲ-ಭೂಮಿ (ವಾಲ್ಮಿ) ಚಟುವಟಿಕೆಗಳ ವಿಚಾರ

1373 (1777) ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ (ಧಾರವಾಡ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಲ-ಭೂಮಿ (ವಾಲ್ಮಿ) (ವಾಟರ್ ಅಂಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ ಇನ್ಸ್‌ಟ್ಯೂಟ್) ಸಂಸ್ಥೆಯು ಬೇಲೂರ ಕೇಂದ್ರದಲ್ಲಿ ನಡೆಸುತ್ತಿರುವ ಚಟುವಟಿಕೆಯ ವಿವರ ನೀಡುವುದು;

ಆ) ಇದರ ಅಧೀನದಲ್ಲಿ ಕೆಲಸ ಮಾಡುವ ಸೇವಾ ಹುದ್ದೆಗಳ ವಿವರ ನೀಡುವುದು: ಪ್ರತಿ ತಿಂಗಳು ಪಡೆಯುವ ಸಂಬಳ ಭತ್ಯೆ ಮತ್ತು ವಾಹನಗಳ ಭತ್ಯೆಗಳ ಪ್ರತ್ಯೇಕ ವಿವರ ನೀಡುವುದು;

ಇ) ಸದರಿ ಕೇಂದ್ರದಲ್ಲಿ ಉದ್ಘಾಟನೆ ಮಾಡಿ ವಿಶೇಷ ಸ್ಥಾನಮಾನ ಕಲ್ಪಿಸಿದ ನಂತರ ರೈತರಿಗಾಗಿ ನಡೆದಿರುವ ಚಟುವಟಿಕೆಯ ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಜಲ ಸಂಪನ್ಮೂಲ ಇಲಾಖೆ, ಕೃಷಿ ಇಲಾಖೆ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ಸಿಬ್ಬಂದಿಗೆ ಮತ್ತು ರೈತರಿಗೆ, ನೀರಾವರಿ ಕೃಷಿ ಮತ್ತು ನೀರಾವರಿ ನಿರ್ವಹಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಬಗ್ಗೆ ತರಬೇತಿ ನೀಡುವುದು. ಈ ತರಬೇತಿಯಲ್ಲಿ ಭೂ ಅಭಿವೃದ್ಧಿ ಮತ್ತು ನೀರಿನ ಸಮರ್ಥ ನಿರ್ವಹಣೆ ಬಗ್ಗೆ ಆದ್ಯತೆ ನೀಡಲಾಗುವುದು. ಇದಲ್ಲದೆ, ಜಲ ಸಂಪನ್ಮೂಲ ಇಲಾಖೆ, ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ನೀರು ಬಳಕೆದಾರರ ಸಹಕಾರ ಸಂಘಗಳು ಹಾಗೂ ಸ್ವಯಂ ಸೇವಾ ಸಂಸ್ಥೆ ನೆರವಿನಿಂದ ಕ್ರಿಯಾ ಸಂಶೋಧನಾ ಕಾರ್ಯಕ್ರಮ ಅನುಷ್ಠಾನ ಮಾಡಿದೆ. ಇದಲ್ಲದೆ, ಸರ್ಕಾರಕ್ಕೆ ಹಾಗೂ ನೀರು ಬಳಕೆದಾರರ ಸಹಕಾರಿ ಸಂಘಗಳಿಗೆ ನೀರು ನಿರ್ವಹಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಕಾರ್ಯಕ್ರಮಕ್ಕೆ ಮಾರ್ಗದರ್ಶನ ಹಾಗೂ ತಾಂತ್ರಿಕ ಸಹಾಯ ನೀಡಲಾಗುತ್ತಿದೆ. ವಾಲ್ಮಿ ಹಾಗೂ ಕೃಷಿ ವಿಶ್ವವಿದ್ಯಾಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ ನೀರಾವರಿ ಕೃಷಿಗಾಗಿ ಭೂ ಅಭಿವೃದ್ಧಿ ವಿವಿಧ ನೀರಾವರಿ ಪದ್ಧತಿಗಳು, ನೀರಿನ ನಿರ್ವಹಣೆ ಹಾಗೂ ರೈತರಿಗೆ ಉಪಯುಕ್ತವಾದ ಬೆಳೆ ಪದ್ಧತಿಗಳ ಬಗ್ಗೆ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದು. ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಕಾರ್ಯಗಾರ, ಸಮ್ಮೇಳನ ಏರ್ಪಡಿಸುವುದು ಹಾಗೂ ಉಪಯುಕ್ತ ಪ್ರಕಟಣೆಗಳನ್ನು ಹೊರತರುವುದು.

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) 1987ರಿಂದ ಈವರೆಗೆ, 100,50 ರೈತರಿಗೆ ತರಬೇತಿ, ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು, ಕೃಷಿ ವಿಶ್ವವಿದ್ಯಾಲಯ, ರಿಸರ್ಚ್ ಸ್ಟೇಶನ್‌ಗಳಿಗೆ ಹಾಗೂ ಪ್ರಗತಿಪರ ರೈತರ ಹೋಲಗಳಿಗೆ ಭೇಟಿ ಏರ್ಪಡಿಸಲಾಗಿದೆ. ನೀರಾವರಿ ನಿರ್ವಹಣೆಗಾಗಿ ರೈತರನ್ನು ಅಧಿಕಾರಯುಕ್ತರನ್ನಾಗಿ ಮಾಡಲಾದ ಸರ್ಕಾರದ ಆದೇಶವನ್ನು ಪ್ರಚಾರಪಡಿಸಲಾಗಿದೆ. ರೈತರು ತರುವ ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಮತ್ತು ಅವರ ಹೊಲಗಳಿಗೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡಲಾಗಿದೆ. ಸಿಬ್ಬಂದಿ ತರಬೇತಿ ಸಮಯದಲ್ಲಿ ರೈತರನ್ನು ಉತ್ತೇಜಿಸುವ ಮನೋಭಾವ ಬೆಳೆಸಿ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಕೆಲಸ ಮಾಡುವ ಕೌಶಲ್ಯವನ್ನು ಬೆಳೆಸಲು ಅವಶ್ಯಕ ತರಬೇತಿ ನೀಡಲಾಗುತ್ತಿದೆ.

ಅನುಬಂಧ - 1

ಕ್ರ. ಸಂ.	ಹುದ್ದೆ	ಮೂಲ ವೇತನ	ತುಟ್ಟಿಭತ್ಯೆ	ಮನೆ ಬಾಡಿಗೆ	ನಗರ ಪರಿಹಾರ ಭತ್ಯೆ	ವೈದ್ಯಕೀಯ ಭತ್ಯೆ	ನಿಯೋಜನೆ ಭತ್ಯೆ	ವಿಶೇಷ ವೇತನ	ನಿರ್ದೇಶಕರ ಸ್ವಂತ ಚಾಲಕನ ವೇತನ(ಪಿ.ಪಿ)	ಒಟ್ಟೆ ತೊಳೆಯುವ ಭತ್ಯೆ	ಒಟ್ಟು
1	2	3	4	5	6	7	8	9	10	11	12
1.	ನಿರ್ದೇಕರು	ಹೆಚ್ಚುವರಿ ಪ್ರಭಾರದಲ್ಲಿದ್ದು ಯಾವುದೇ ಭತ್ಯೆ ಮಂಜೂರು ಮಾಡಿರುವುದಿಲ್ಲ									
2.	ಪ್ರಾಧ್ಯಪಕರು ಮತ್ತು ಪಿ.ಆಯ್. ಎಂ.ಘಟಕದ ಮುಖ್ಯಸ್ಥರು	ಗುತ್ತಿಗೆ ಆಧಾರದ ನೇಮಕಾತಿ ಕೊಡೀಕೃತ ವೇತನ									21500
3.	ಸಹಾಯಕ ಪ್ರಧ್ಯಾಪಕರು	11200	5488	1456	40						18184
4.	ಸಹಾಯಕ ನಿರ್ದೇಶಕರು	10360	5076	1347	40						16823
5.	ಲೆಕ್ಕ ಅಧೀಕ್ಷಕರು	5575	2732	727	40	25	405				9502
6.	ಪ್ರಥಮ ದರ್ಜೆ ಸಹಾಯಕ	5200	2548	676	40	25	299		100		8888
7.	ದ್ವಿತೀಯ ದರ್ಜೆ ಸಹಾಯಕ	4250	2083	553	40	25	273				7224
8.	ಪ್ರಥಮ ದರ್ಜೆ ಉಗ್ರಾಣ ಪಾಲಕರು	6900	3381	897	40	25	273				11516
9.	ದ್ವಿತೀಯ ದರ್ಜೆ ಲೆಕ್ಕ ಸಹಾಯಕರು	1760	2235	350	40	25					4410

1	2	3	4	5	6	7	8	9	10	11	12
10.	ಶೀಪ್ರಲಿಪಿಗಾರರು	3850	1733	501	40	25		75			6224
11.	ವಾಹನ ಚಾಲಕರು-1	5575	2732	725	40	25	273	60		120	9550
12.	ವಾಹನ ಚಾಲಕರು-2	5325	2609	692	40	25	273	60		120	9144
13.	ವಾಹನ ಚಾಲಕರು-3	4450	2181	579	40	25		60	100	120	7555
14.	ವಾಹನ ಚಾಲಕರು-4	3550	1740	462	40	25	240	60		120	6237
15.	ಅನುಚರರು	3225	1580	419	40	25	193				5482
16.	ಜವಾನ-1	3450	1691	449	40	25	174			20	5849
17.	ಜವಾನ-2	3450	1691	449	40	25	174			20	5849
18.	ಜವಾನ-3	3450	1691	449	40	25	174			20	5849
19.	ಜವಾನ-4	2600	1274	338	40	25	159			20	4456

ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರು

(ದಿನದ ಆಧಾರದ ಮೇಲೆ ವೇತನ ಒಂದು ದಿನಕ್ಕೆ)

ಕ್ರಮ ಸಂಖ್ಯೆ	ಹುದ್ದೆ	ವೇತನ
1.	ಗ್ರಂಥಪಾಲಕರು	152
2.	ಎಫ್ರೋಗ್ರಾಫಿಕ್ಸ್	100
3.	ಬೆರಳಚ್ಚುಗಾರರು	100
4.	ಇಲೆಕ್ಟ್ರಿಕಲ್ ವೈರ್‌ಮನ್	86
5.	ವಾಲ್ವಮನ್	86
6.	ಗಾರ್ಡನರ್	83
7.	ಜವಾನ	83